# ✻ ಶ್ರೀಮಾತೆಗೆ ಯಾರೂ ಅಸ್ಪೃಶ್ಯರಲ್ಲ ✻

ಶ್ರೀಮಾತೆಯ ಬಳಿ ದೀಕ್ಷೆಯನ್ನು ಪಡೆದ ಅನೇಕ ಶಿಷ್ಯರಲ್ಲಿ ಒಬ್ಬರು ಸ್ವಾಮಿ ಆದಿನಾಥಾನಂದರು. ಜಮ್‌ಶೆಡ್‌ಪುರದಲ್ಲಿರುವ ರಾಮಕೃಷ್ಣ ಮಠ ಹಾಗೂ ಮಿಷನ್ನಿನ ಕೇಂದ್ರದ ಅಧ್ಯಕ್ಷರಾಗಿ ದೀರ್ಘಕಾಲ ಬಾಳಿದ ಇವರು ಶ್ರೀಮಾತೆಯ ಬಗ್ಗೆ ಹಲವಾರು ಘಟನೆಗಳನ್ನು ಹೇಳುತ್ತಿದ್ದರು. ಆದಿನಾಥಾನಂದರು ಒಮ್ಮೆ ದಕ್ಷಿಣ ಭಾರತಕ್ಕೆ ಬಂದಿದ್ದರು. ಶಿವನ ಸಮುದ್ರದ ಜಲವಿದ್ಯುತ್ ಯೋಜನೆಯಲ್ಲಿ ಫೋರ್‌ಮನ್ ಆಗಿ ಕೆಲಸ ಮಾಡುತ್ತಿದ್ದ ಶ್ರೀ ಆದಿಮೂಲಂ ಅವರ ಮನೆಯಲ್ಲಿ ವಾಸ್ತವ್ಯ ಹೂಡಿದ್ದರು. ಆದಿಮೂಲಂ ಕೂಡ ಶ್ರೀಮಾತೆಯಿಂದ ಮಂತ್ರದೀಕ್ಷೆ ಪಡೆದವರೇ. ಅವರ ದೀಕ್ಷೆಯ ವಿವರಗಳನ್ನು ತಿಳಿಯಬೇಕೆಂಬ ಕುತೂಹಲ ಆದಿನಾಥಾನಂದರಿಗೆ. ಆ ಅಪೂರ್ವ ದಿನಗಳನ್ನು ವಿವರಿಸುತ್ತ ಆದಿಮೂಲಂ ಭಾವುಕರಾಗಿ ಕಂಬನಿ ಸುರಿಸುತ್ತ "ನಾನೀಗ ಏನಾಗಿರುವೆನೋ ಅದೆಲ್ಲವೂ ಶ್ರೀಮಾತೆಯ ಕೃಪೆಯಿಂದಲೇ" ಎಂದು ಹೇಳಿದರು.



ಬೆಂಗಳೂರಿನ ಆಶ್ರಮದಲ್ಲಿ ಶ್ರೀಮಾತೆಯವರ ಕೋಣೆ

ಶ್ರೀಮಾತೆ ಬೆಂಗಳೂರಿಗೆ ಬಂದಿದ್ದಾಗ ಆದಿಮೂಲಂ ಆಗಿನ್ನೂ ಹತ್ತನೇ ತರಗತಿಯಲ್ಲಿ ಓದುತ್ತಿದ್ದ ವಿದ್ಯಾರ್ಥಿ. ಆಗ ಬೆಂಗಳೂರು ಆಶ್ರಮದ ದೇವಸ್ಥಾನದಲ್ಲಿ ಶ್ರೀರಾಮಕೃಷ್ಣರ ಭಾವಚಿತ್ರವು ಈಗ ಶ್ರೀಮಾತೆಯ ಚಿತ್ರವಿರುವ ಕೋಣೆಯಲ್ಲಿರುತ್ತಿತ್ತು. ಬದಿಯ ಮತ್ತೊಂದು ಕೋಣೆಯಲ್ಲಿ (ಈಗ ಧ್ಯಾನ ಕೊಠಡಿಯಾಗಿ ಮತ್ತು ಪೂಜೆಗೊಳ್ಳುವ ವಿವಿಧ ದೇವದೇವಿಯರ ಚಿತ್ರಪಟಗಳನ್ನು ಇಡುವುದಕ್ಕಾಗಿ ಬಳಕೆಯಾಗುತ್ತಿದೆ) ಶ್ರೀಮಾತೆ ಹಾಗೂ ಅವರೊಂದಿಗೆ ಬಂದಿದ್ದ ಇತರ ಮಹಿಳೆಯರು ವಾಸವಾಗಿದ್ದರು. ಅಲ್ಲಿಂದ ಶ್ರೀಮಾತೆಗೆ ಆಶ್ರಮದ ಗೇಟು ಹಾಗೂ ರಸ್ತೆ ಕಾಣಿಸುತ್ತಿತ್ತು. ಬಾಲಕನೊಬ್ಬ ಪ್ರತಿದಿನ ಗೇಟಿನ ಬಳಿ ನಿಂತುಕೊಂಡು ಇತ್ತ ನೋಡುತ್ತಿರುವುದನ್ನು ಶ್ರೀಮಾತೆ ಗಮನಿಸಿದರು. ಆ ಬಾಲಕನ ಬಗ್ಗೆ ಸೇವಕನನ್ನು ವಿಚಾರಿಸಿದರು. ಅವನು ಹರಿಜನ ಬಾಲಕ, ಸಮಾಜದ ಕಟ್ಟಳೆಗಳು ಅವನನ್ನು ಅಸ್ಪೃಶ್ಯ ಎಂದು ಎಣಿಸಿರುವುದರಿಂದ ಅವನು ಆಶ್ರಮದ ಒಳಗೆ ಬರಲು ಸಾಧ್ಯವಿಲ್ಲ ಎಂದು ಸೇವಕರು ಶ್ರೀಮಾತೆಯವರಿಗೆ ತಿಳಿಸಿದರು.

ಆ ಬಾಲಕನೇ ಆದಿಮೂಲಂ. ಶ್ರೀಮಾತೆಯ ಬಗ್ಗೆ ಅವನು ಬೇರೆಯವರು ಮಾತನಾಡಿಕೊಳ್ಳುತ್ತಿದ್ದುದನ್ನು ಕೇಳಿದ್ದ. ಅವರನ್ನು ಕಾಣಬೇಕೆಂಬ ತೀವ್ರ ಹಂಬಲದಿಂದ ಪ್ರತಿದಿನ ಗೇಟಿನ ಬಳಿ ಬಂದು ನಿಲ್ಲುತ್ತಿದ್ದ. ಆದರೆ ಅಸ್ಪೃಶ್ಯತೆ ಬಲವಾಗಿದ್ದ ಆ ದಿನಗಳಲ್ಲಿ ಆಶ್ರಮ, ದೇವಸ್ಥಾನಗಳಿಗೆ ಹೋಗುವುದಕ್ಕೆ ಆ ಹುಡುಗನಿಗೆ ಆಸ್ಪದವಿರಲಿಲ್ಲ. "ಮಗು, ಆ ಹುಡುಗ ಏತಕ್ಕೆ ಒಳಗೆ ಬರುತ್ತಿಲ್ಲ?" ಎಂದು ಸ್ಥಳೀಯ ಭಕ್ತನೊಬ್ಬನನ್ನು ಪ್ರಶ್ನಿಸಿದರು ಶ್ರೀಮಾತೆ. ಅದಕ್ಕೆ ಆತ, "ಅವನು ಹರಿಜನರ ಪಂಗಡದವನು. ಮೈ, ಬಟ್ಟೆಗಳೆಲ್ಲ ಶುಭ್ರವಾಗಿಲ್ಲ. ಹೇಗೆ ಒಳಗೆ ಬಿಡುವುದು?" ಎಂದನು. ಆಗ ಶ್ರೀಮಾತೆಯವರು "ಸರಿ ಹಾಗಾದರೆ ಅವನು ಸ್ನಾನ ಮಾಡಿ, ಶುಭ್ರವಾದ ಬಟ್ಟೆಗಳನ್ನು ಹಾಕಿಕೊಂಡು ಬಂದರೆ ಅಭ್ಯಂತರವಿಲ್ಲ ತಾನೇ? ನಾಳೆಯ ದಿವಸ ಸ್ನಾನ ಮಾಡಿ, ಸ್ವಚ್ಛವಾದ ಉಡುಪನ್ನು ಧರಿಸಿ ಬಂದು ನನ್ನನ್ನು ಕಾಣುವಂತೆ ಆ ಬಾಲಕನಿಗೆ ಹೇಳು" ಎಂದರು. ಶ್ರೀಮಾತೆಯ ಮಾತನ್ನು ಅಲ್ಲಗಳೆಯಲಾದೀತೇ! ಮಾರನೆಯ ದಿನ ಸಂಜೆಯ ಹೊತ್ತಿಗೆ ಬಾಲಕನು ಸ್ನಾನ ಮಾಡಿ ಚೆನ್ನಾಗಿ ಒಗೆದ ಬಟ್ಟೆಗಳನ್ನು ಧರಿಸಿ ಬಂದ. ಅವನನ್ನು ಶ್ರೀಮಾತೆಯ ಬಳಿಗೆ ಕರೆತರಬೇಕಾದರೆ ಪೂಜೆಯ ಕೋಣೆಯ ಮೂಲಕವೇ ಹಾದುಹೋಗಬೇಕಿತ್ತು! ಬಾಲಕನನ್ನು ಕಂಡ ಕೂಡಲೇ ಶ್ರೀಮಾತೆ ಬಹಳ ಪ್ರೀತಿಯಿಂದ ಅವನನ್ನು ತಮ್ಮ ಪಕ್ಕದಲ್ಲಿಯೇ ಕುಳ್ಳಿರಿಸಿಕೊಂಡು ತಿನ್ನಲು ಸಿಹಿತಿಂಡಿಗಳನ್ನು ನೀಡಿದರು. ತಮ್ಮ ಚೀಲದಿಂದ ನೋವಿನ ತೈಲವನ್ನು ತೆಗೆದು, ಬಾಲಕನಿಗೆ ಹೇಳಿದರು, "ನೋಡು ಮಗು, ನನ್ನ ಮೊಣಕಾಲು ಬಹಳ ನೋಯುತ್ತಿದೆ. ನೀನು ಸ್ವಲ್ಪ ಎಣ್ಣೆ ಹಚ್ಚಿ ನೀವಬಲ್ಲೆಯಾ? ಪ್ರತಿಸಂಜೆಯೂ ಬಂದು ಮಾಲೀಸು ಮಾಡಲು ನಿನಗೆ ಸಾಧ್ಯವೇ?" ಹೀಗೆ ಪ್ರತಿದಿನವೂ ಆದಿಮೂಲಂ ಪ್ರಾರ್ಥನಾ ಮಂದಿರದೊಳಗೆ ಬಂದು ಶ್ರೀಮಾತೆಯ ಸೇವೆಯನ್ನು ಮಾಡಿ ಹೋಗುತ್ತಿದ್ದ. ಸಮಾಜದ ಜಾತಿ ಕಟ್ಟಳೆಗಳು ಉಪೇಕ್ಷೆಗೊಂಡವು.

ಒಂದು ದಿನ ಭಕ್ತರೊಬ್ಬರು ಶ್ರೀಮಾತೆಯ ಬಳಿ ಬಂದು ತಮ್ಮ ಮನೆಗೆ ದಯಮಾಡಿಸಿ ಅನ್ನಪ್ರಸಾದವನ್ನು ಸ್ವೀಕರಿಸಬೇಕೆಂದು ವಿನಯದಿಂದ ಪ್ರಾರ್ಥಿಸಿಕೊಂಡರು. ಶ್ರೀಮಾತೆ ಒಪ್ಪಿಕೊಂಡರು. ಆದರೆ ಒಂದು ಷರತ್ತನ್ನು ಹಾಕಿದರು: 'ನಮ್ಮಲ್ಲಿ ನಿತ್ಯ ಬರುತ್ತಿರುವ ಈ ಹರಿಜನ ಬಾಲಕನನ್ನೂ ಆಹ್ವಾನಿಸಬೇಕು. ಇಲ್ಲದಿದ್ದರೆ ನಾನು ಬರಲಾರೆ.'' ಒಲ್ಲದ ಮನಸ್ಸಿನಿಂದ ಆ ಭಕ್ತ ಒಪ್ಪಿಕೊಂಡ. ಪ್ರತಿದಿನ ಸಂಜೆಯ ಹೊತ್ತು ಬರುತ್ತಿದ್ದ ಬಾಲಕ ಮಾರನೆಯ ದಿನ ಮಧ್ಯಾಹ್ನವೇ ಬಂದ. ಶ್ರೀಮಾತೆ ತಮ್ಮ ಎಲೆಯಲ್ಲಿ ಬಡಿಸಿದ್ದ ಎಲ್ಲ ಪದಾರ್ಥಗಳನ್ನೂ ಸ್ವಲ್ಪ ರುಚಿ ನೋಡಿ, ಪ್ರಸಾದವನ್ನು ಬಾಲಕನಿಗೆ ನೀಡಿದರು. ಅದನ್ನು ಎಲ್ಲರಿಗೂ ಅವನ ಕೈಯಿಂದಲೇ ಬಡಿಸುವಂತೆ ಆದೇಶವಿತ್ತರು! ಕೆಲವರು ಮುಖವನ್ನು ಸಿಂಡರಿಸಿಕೊಂಡರು. ಆದರೆ ಶ್ರೀಮಾತೆಯ ಆದೇಶವನ್ನು ಯಾರು ತಾನೇ ಉಲ್ಲಂಘಿಸಬಲ್ಲರು? ಬೆಂಗಳೂರು ಆಶ್ರಮದ ಆಗಿನ ಅಧ್ಯಕ್ಷರಾಗಿದ್ದ ಸ್ವಾಮಿ ನಿರ್ಮಲಾನಂದರು ಅಲ್ಲಿ ನೆರೆದಿದ್ದ ಎಲ್ಲರಿಗೂ ಹೇಳಿದರು, **'ನೋಡಿ, ಶ್ರೀಮಾತೆ ಈ ಮೂಲಕ ಸರಿಯಾದ ಆಚರಣೆಯನ್ನು ನಮಗೆ ತೋರಿಸಿದ್ದಾರೆ. ಇನ್ನು ಮೇಲೆ ಅಸ್ಪೃಶ್ಯತೆ ನಮ್ಮ ದೇಶದಲ್ಲಿ ಉಳಿಯಲಾರದು. ಇದು ನಮ್ಮಿಂದ ಹೋಗಲೇಬೇಕು.''**

* * *

ಸ್ವಾಮಿ ವಿಜ್ಞಾನಾನಂದರು ಮೊದಮೊದಲು ಶಿಷ್ಯರಿಗೆ ದೀಕ್ಷೆ ನೀಡುವಾಗ ಶ್ರೀರಾಮಕೃಷ್ಣರ ಮಂತ್ರವನ್ನು ಮಾತ್ರ ಕೊಡುತ್ತಿದ್ದರು. ಒಂದು ದಿನ ಅಲಹಾಬಾದ್ ಆಶ್ರಮದ ದೇವಸ್ಥಾನದಿಂದ ಅಡುಗೆಯ ಮನೆಯ ಕಡೆಗೆ ಹೋಗುತ್ತಿದ್ದಾಗ ಶ್ರೀರಾಮಕೃಷ್ಣರು ಕಾಣಿಸಿಕೊಂಡು, "ನೀನು ಆಕೆಯ ಹೆಸರನ್ನು ಏಕೆ ಬಿಟ್ಟುಬಿಡುತ್ತಿರುವೆ?'' ಎಂದು ಶ್ರೀಮಾತೆಯ ಕುರಿತು ಕೇಳಿದರು. ಅಂದಿನಿಂದ ಅವರು ಶ್ರೀಮಾತೆಯ ಹೆಸರನ್ನೂ ದೀಕ್ಷೆಯಲ್ಲಿ ಬಳಸಲು ಆರಂಭಿಸಿದರು.

* * *

ತನ್ನ ಇಪ್ಪತ್ತನೇ ವಯಸ್ಸಿನಲ್ಲಿ ಶ್ರೀಮಾತೆಯಿಂದ ದೀಕ್ಷೆಯನ್ನು ಪಡೆದ ಮಹಿಳೆಯೊಬ್ಬಳು ಮನೆಗೆ ಬಂದು ಹಿರಿಯರಿಗೆ ತಾನು ದೀಕ್ಷೆ ಪಡೆದ ವಿಷಯವನ್ನು ತಿಳಿಸಿದಳು. ಮಹಿಳೆಯಿಂದ ದೀಕ್ಷೆ ಪಡೆಯುವುದಾಗಲೀ, ಮಹಿಳೆಯನ್ನು ಗುರುವೆಂದು ಸ್ವೀಕರಿಸುವುದಾಗಲೀ ಶಾಸ್ತ್ರಸಮ್ಮತವಲ್ಲ ಎಂದು ಕೆಲವರು



ಶ್ರೀ ಆದಿಮೂಲಂ (ಮಧ್ಯದಲ್ಲಿರುವವರು)

ಹೇಳಿದರು. ಅದನ್ನು ಕೇಳಿದಾಗ ಆಕೆಯ ಮನಸ್ಸಿನಲ್ಲಿ ಸಂಶಯ ಪ್ರಾರಂಭವಾಯಿತು. ಪರಿಹಾರಕ್ಕಾಗಿ ಮತ್ತೆ ಶ್ರೀಮಾತೆಯ ಬಳಿಗೇ ಬಂದು ಎಲ್ಲವನ್ನೂ ಹೇಳಿಕೊಂಡಳು. ಶ್ರೀಮಾತೆ ಆಕೆಯನ್ನು ಪೂಜೆಯ ಕೊಠಡಿಗೆ ಕರೆದುಕೊಂಡು ಬಂದು ಶ್ರೀರಾಮಕೃಷ್ಣರಿಗೆ ಪ್ರಣಾಮಗಳನ್ನು ಸಲ್ಲಿಸಲು ತಿಳಿಸಿದರು. ಆಕೆ ನಮಸ್ಕಾರ ಮಾಡಿ ಎದ್ದು ನೋಡುತ್ತಾಳೆ! ಶ್ರೀಮಾತೆಯೇ ಇಲ್ಲ! ಶ್ರೀರಾಮಕೃಷ್ಣರೇ ಆ ಸ್ಥಳದಲ್ಲಿದ್ದರು! ಈ ಮೂಲಕ ಅವರಿಬ್ಬರೂ ಒಂದೇ ಶಕ್ತಿ ಎಂಬುದನ್ನು ಮನವರಿಕೆ ಮಾಡಿಕೊಟ್ಟರು.

**ಸಂಗ್ರಹ: ಸ್ವಾಮಿ ಶಾಂತಿನಾಥಾನಂದ**

**[ಈ ಮೇಲಿನ ಘಟನೆಗಳನ್ನು ರಾಯ್‌ಪುರದ ರಾಮಕೃಷ್ಣ ಮಿಷನ್ ಆಶ್ರಮದಲ್ಲಿ ಸ್ವಾಮಿ ಆದಿನಾಥಾನಂದಜಿ ೧೨.೪.೧೯೯೪ರಂದು ವಿವರಿಸಿದ್ದರು. ಇದನ್ನು ಸ್ವಾಮಿ ತ್ಯಾಗಾತ್ಮಾನಂದಜಿ ಕಾನ್ಪುರ ಆಶ್ರಮದಿಂದ ಹೊರತರಲಾದ ಶ್ರೀಮಾತೆಯ ೧೫೦ನೆಯ ಜನ್ಮದಿವಸದ "ಮಾತೃವಂದನಾ" ಸ್ಮರಣಿಕೆಯಲ್ಲಿ ಉಲ್ಲೇಖಿಸಿದ್ದಾರೆ.]**

**ಕೆಲವು ಸಲ ಕರುಣೆಯಲ್ಲಿ ನನ್ನನ್ನು ನಾನೇ ಮರೆತುಬಿಡುತ್ತೇನೆ. ನನಗೆ ನಾನಾರೆಂಬುದೇ ನೆನಪಿರುವುದಿಲ್ಲ. ನಾನು ನನ್ನ ಈ ಮಕ್ಕಳಿಗಾಗಿ ಯಾವುದೇ ನಿಯಮವನ್ನೂ ಮೀರಬಲ್ಲೆ. ನನ್ನ ಮಕ್ಕಳಿಗಾಗಿ ನಾನು ಏನನ್ನು ಬೇಕಾದರೂ ಮಾಡಬಲ್ಲೆ. ಅದರಲ್ಲೇನೂ ದೋಷವಿಲ್ಲ. ಶ್ರೀರಾಮಕೃಷ್ಣರು ನನ್ನ ಈ ಶರೀರದಲ್ಲಿ ಸೂಕ್ಷ್ಮರೂಪದಲ್ಲಿ ಇದ್ದಾರೆ. ಹೀಗೆಂದು ಅವರೇ ಹೇಳಿದ್ದಾರೆ.**

**—ಶ್ರೀಮಾತೆ ಶಾರದಾದೇವಿ**